# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:** 5019/2022 ಫ್ರಾಸಾ-26
ಚಾಸಾ-39

ದಿನಾಂಕ: 31-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ರಂಜಿತಾ ಜಿ. |
| **ತಂದೆಯ / ಗಂಡನ ಹೆಸರು** | ಮರಿಯಣ್ಣ |
| **ವಯಸ್ಸು** | 32 |
| **ಉದ್ಯೋಗ** | ಡಬ್ಲೂ ಪಿ.ಸಿ ನಂ-565, ವೃತ್ತ ನಿರೀಕ್ಷಕರ ಕಛೇರಿ, ಕೊರಟಗೆರೆ |
| **ವಾಸಸ್ಥಳ** | ಕೊರಟಗೆರೆ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ನಾನು 23.05.2018 ರಿಂದ 12 ಜೂನ್ 2023 ರವರೆಗೆ ಡಬ್ಲೂಪಿ ಸಿ ಆಗಿ ಕೊರಟಗೆರೆ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 15.02.2022 ರಂದು ಚಾಸಾ-50 ರವರು ಈ ಪ್ರಕರಣದಲ್ಲಿ ಆರೋಪಿಗಳಾದ ಪುನಿತ್ ಮತ್ತು ಶೈಲಜ ರವರ ಪತ್ತೆಗೆ ನನ್ನನ್ನು ಮತ್ತು ನಮ್ಮ ಠಾಣೆಯ ಚಾಸಾ-48 ರವರನ್ನು ನೇಮಕ ಮಾಡಿದ್ದು, ಆ ದಿನ ನಾವುಗಳು ಮಧುಗಿರಿ , ಪುಲಮಘಟ್ಟ ಕಡೆಗೆ ಪತ್ತೆ ಮಾಡಲು ಬೇಟಿ ಕೊಟ್ಟು ಆರೋಪಿತರನ್ನು ಪತ್ತೆ ಮಾಡಲು ಪ್ರಯತ್ನಿಸಿದ್ದು ಆದರೆ ಯಾವುದೇ ಮಾಹಿತಿ ಸಿಕ್ಕಿರುವುದಿಲ್ಲ. ನಂತರ ವಾಪಸ್ಸು ಕೊರಟಗೆರೆಗೆ ಬಂದು ಈ ಬಗ್ಗೆ ಸಿ.ಪಿ.ಐ ರವರಿಗೆ ವರದಿ ಮಾಡಿ ಅಲ್ಲಿಯೇ ಮುಕ್ಕಾಂ ಇದ್ದು ದಿ.16.02.2022 ರಂದು ಸಿ.ಪಿಐ ರವರ ಆದೇಶದಂತೆ ನಾನು ಮತ್ತು ಚಾಸಾ-38 ಬಾತ್ಮಿದಾರಿಂದ ಮಾಹಿತಿ ಪಡೆದು ತುಮಕೂರಿಗೆ ಹೋಗಿ ವಿಚಾರ ಮಾಡಲಾಗಿ ಅಲ್ಲಿನ ಬಾತ್ಮಿದಾರರ ಮಾಹಿತಿಯಂತೆ ಸಿರಾ ಗೇಟಿನ ಬಳಿ ಇರುವ ಹೌಸಿಂಗ್ ಬೋರ್ಡ್ ಮನೆಯ ಬಳಿ

**ಚಾಸಾ-39**

ಯಾರೋ ಒಬ್ಬ ಹೆಂಗಡು ಇದ್ದಾಳೆ ಎಂದು ಮಾಹಿತಿ ಬಂದಿದ್ದು ಅದರಂತೆ ನಾವು ಸಿರಾ ಗೇಟ್ ಹೌಸಿಂಗ್ ಬೋರ್ಡ್ ಗೆ ಹೋಗಿ ಆರೋಪಿ ಶೈಲಜಾ ರವರು ಅವರ ದೊಡ್ಡಪ್ಪ ವರದರಾಜು ರವರ ಮಗ ಬ್ರಹ್ಮಚಾರಿ ರವರ ಮನೆಯಲ್ಲಿ ಇರುವುದಾಗಿ ತಿಳಿದು ಬಂದಿದ್ದರಿಂದ ಅಲ್ಲಿಗೆ ಹೋಗಿ ನೋಡಲಾಗಿ ಶೈಲಜ ಇದ್ದು ಅವಳನ್ನು ವಿಚಾರ ಮಾಡಿ ಅವರ ಹೆಸರು ವಿಳಾಸ ಕೇಳಿ ಅವಳವನ್ನು ನಮ್ಮ ಜೊತೆ ಬೆಳಿಗ್ಗೆ 8-45 ವಶಕ್ಕೆ ಪಡೆದುಕೊಂಡು ಅವಳನ್ನು ಚಾಸಾ-50 ರವರ ಮುಂದೆ ಬೆಳಿಗ್ಗೆ 10-15 ಕ್ಕೆ ಹಾಜರುಪಡಿಸಿ ಚಾಸಾ-38 ರವರು ವರದಿ ನೀಡಿರುತ್ತಾರೆ. ಚಾಸಾ-38 ರವರ ಸಹಿ ನೋಡಿದರೆ ಗುರುತಿಸುತ್ತೇನೆ. ಸದರಿ ವರದಿಯನ್ನು ನಿಪಿ-38 ಎಂದು, ಚಾಸಾ-38 ರವರ ಸಹಿಯನ್ನು ನಿಪಿ-38(ಎ) ಎಂದು ಗುರುತಿಸಲಾಯಿತು. ಅದೇ ದಿನ ಮದ್ಯಾಹ್ನ 1-00 ಗಂಟೆಗೆ ಚಾಸಾ-50 ರವರ ಜೊತೆ ಕೊರಟಗೆರೆ ಟೌನ್ ಸಜ್ಜನರ ಬೀದಿಯಲ್ಲಿರುವ ಸುಮಿತ್ರಮ್ಮ ರವರ ಮನೆಗೆ ನನ್ನನ್ನು ಚಾಸಾ-36 ಮತ್ತು 40 ರವರು ಆರೋಪಿಗಳನ್ನು ಕರೆದುಕೊಂಡು ಹೋಗಿದ್ದು ಅಲ್ಲಿ ಮೃತೆ ಸಮಿತ್ರಮ್ಮ ರವರನ್ನು ಉಸಿರುಗಟ್ಟಿಗೆ ಕೊಲೆ ಮಾಡಿ ಸಂಪಿನ ಒಳಗಡೆ ಹಾಕಿದ ಸ್ಥಳವನ್ನು ಪಂಚರಾದ ಚಾಸಾ-12 ರಿಂದ 14 ರವರ ಸಮಕ್ಷಮ ಆರೋಪಿತರು ತೋರಿಸಿದ್ದು ಸದರಿ ಜಾಗದ ಪಂಚನಾಮೆಯನ್ನು ನಿಪಿ-8 ರಂತೆ ಮಾಡಿರುತ್ತಾರೆ. ಪಂಚನಾಮೆ ಕಾಲಕ್ಕೆ ನಿಪಿ-9 ರಿಂದ 11 ರಂತೆ ಪೊಟೋ ತೆಗೆದಿರುತ್ತಾರೆ. ಸದರಿ ಪೋಟೋಗಳಲ್ಲಿ ತಮ್ಮ ಇರುವಿಕೆಯನ್ನು ಗುರುತಿಸಿರುತ್ತಾರೆ.

ನಂತರ ಕೊರಟಗೆರೆ ಟೌನ್ ನ ಪಕ್ಕದಲ್ಲಿರುವ ರುದ್ರಭೂಮಿಗೆ ಚಾಸಾ-50 ರವರು ನನ್ನನ್ನು , ಚಾಸಾ-36 , 40 ರವರನ್ನು ಆರೋಪಿತರನ್ನು ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ಸುಮಿತ್ರಮ್ಮ ನನ್ನು ಹೂತಿರುವ ಸ್ಥಳದ ಪಂಚನಾಮೆಯನ್ನು ನಿಪಿ-2 ರಂತೆ ಮದ್ಯಾಹ್ನ 2-30 ರಿಂದ 3-30 ಗಂಟೆಗೆ ವರೆಗೆ ಮಾಡಿರುತ್ತಾರೆ. ನಿಪಿ-2 ಪಂಚನಾಮೆ ಕಾಲಕ್ಕೆ ನಿಪಿ-3 ರಂತೆ ಪೊಟೋ ತೆಗೆದಿರುತ್ತಾರೆ , ಅದನ್ನು ಗುರುತಿಸುತ್ತೇನೆ.

ಆರೋಪಿ ಶೈಲಜಾ ಳನ್ನು ನಾವು ವಶಕ್ಕೆ ಪಡೆದುಕೊಂಡು ಕರೆದುಕೊಂಡು ಬಂದು ಚಾಸಾ-50 ರ ಮುಂದೆ ಹಾಜರಪಡಿಸಿದ್ದು ಅಲ್ಲಿ ಆರೋಪಿ ಪುನಿತಾ ಕೂಡ ಹಾಜರಿದುದ ಅವರಿಬ್ಬರ ಬಳಿ ಇದ್ದ ಮೊಬೈಲ್‌ಗಳನ್ನು ಪಂಚನಾಮೆ ಮೂಲಕ ಬೆಳಿಗ್ಗೆ 11-30 ರಿಂದ 12-30

ಗಂಟೆಯವರೆಗೆ ಪಂಚನಾಮೆ ಮಾಡಿ ಅಮಾನತ್ತುಪಡಿಸಿಕೊಂಡಿರುತ್ತಾರೆ. ಸದರಿ ಪಂಚನಾಮೆ ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿದೆ. ಸದರಿ ಮೊಬೈಲ್ ಗಳನ್ನು ನೋಡಿದರೆ ಗುರುತಿಸುತ್ತೇನೆ ಅವುಗಳನ್ನು ಈಗಾಗಲೇ ಮು.ಮಾ-1 ಮತ್ತು 2 ಎಂದು ಗುರುತಿಸಲಾಗಿರುತ್ತದೆ. ಸದರಿ ಪಂಚನಾಮೆ ಕಾಲಕ್ಕೆ ನಿಪಿ-6 ಮತ್ತು ನಿಪಿ-7 ಪೊಟೋ ತೆಗೆದಿದ್ದು ಸದರಿ ಪೊಟೋಗಳನ್ನು ಗುರುತಿಸುತ್ತೇನೆ. ವಿ.ಸಿ ಮುಖಾಂತರ ಹಾಜರುಪಡಿಸಿದ ಆರೋಪಿತರನ್ನು ಗುರುತಿಸುತ್ತೇನೆ.

**ಪಾಟೀಸವಾಲು ಶ್ರೀ. ಎಂ.ಎಂ. ವಕೀಲರಿಂದ ಆರೋಪಿತರ ಪರವಾಗಿಃ-**

ನನ್ನನ್ನು ಆರೋಪಿ ಪತ್ತೆಗಾಗಿ ನೇಮಕ ಮಾಡಿಲ್ಲ ಎಂದರೆ ಸರಿಯಲ್ಲ. ಮಧುಗಿಗೆ ಎಷ್ಟು ಗಂಟೆಗೆ ಬಂದಿರುತ್ತೇವೆ ಎಂದು ನನಗೆ ನೆನಪಿರುವುದಿಲ್ಲ, ಪುಲಮಘಟ್ಟದಲ್ಲಿ ಆರೋಪಿತರ ಪತ್ತೆಗಾಗಿ ಪ್ರಯತ್ನ ಮಾಡಿರುತ್ತೇವೆ. ಮಧುಗಿರಿಯಿಂದ ಪುಲಮಘಟ್ಟಕ್ಕೆ ಎಷ್ಟು ಕಿ.ಮೀಟರ್ ಅಂತರ ಇರುತ್ತದೆ ಎಂದು ನನಗೆ ಗೂತ್ತಿಲ್ಲ. ಪುಲಮಘಟ್ಟಕ್ಕೆ ಎಷ್ಟು ಗಂಟೆಗೆ ತಲುಪಿದ್ದೇವು ಎಂದು ನನಗೆ ಹೇಳಲು ಆಗುವುದಿಲ್ಲ. ನಮ್ಮ ಠಾಣೆಯಿಂದ ನಾವು ಮಧುಗಿರಿಯಿಂದ ಪುಲಮಘಟ್ಟಕ್ಕೆ ಖಾಸಗಿ ಬಸ್ಸಿನಲ್ಲಿ ಪ್ರಯಾಣ ಮಾಡಿರುತ್ತೇವೆ. ಸರ್ಚ್ ವಾರೆಂಟ್ ಪಡೆದುಕೊಂಡಿರುವುದಿಲ್ಲ. ಸದರಿ ಪ್ರಯಾಣದ ಬಗ್ಗೆ ಟಿಕೇಟ್ ಗಳನ್ನು ತನಿಖಾಧಿಕಾರಿ ಮುಂದೆ ಹಾಜರುಪಡಿಸಿರುವುದಿಲ್ಲ.

ಆರೋಪಿಯನ್ನು ಪತ್ತೆ ಮಾಡಲು ನನ್ನನ್ನು ನೇಮ ಮಾಡಿರುವುದಿಲ್ಲ , ನಾನು ಆರೋಪಿ ಪತ್ತೆಗಾಗಿ ಎಲ್ಲಿಯೂ ಬೇಟಿ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಶೈಲಜಾ ರವರು ಮನೆಯಲ್ಲಿಯೇ ಇದ್ದು ಅವರನ್ನು ಪೋನ್ ಮಾಡಿ ಸಿ.ಪಿ.ಐ ರವರು ಕಛೇರಿಗೆ ಕರೆಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರ ಪತ್ತೆಗೆ ಹೋಗುವಾಗ ನಮಗೆ ಯಾವುದೇ ಭಾವ ಚಿತ್ರ ಕೊಟ್ಟಿರಲಿಲ್ಲ. ಸುಮಿತ್ರಾಮ್ಮ ರವರ ಮನೆ ಹತ್ತಿರ ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮಹಜರ್ ಕಾಲಕ್ಕೆ ಸ್ಥಳದಲ್ಲಿ ಯಾವುದಾದರು ವಸ್ತುಗಳನ್ನು ಅಮಾನತ್ತುಪಡಿಸಿಕೊಂಡ ಬಗ್ಗೆ ನನಗೆ ನೆನಪಿರುವುದಿಲ್ಲ. ನಮ್ಮ ಠಾಣಾ ಪಿ.ಸಿ ರಮೇಶ್ ರವರು ಪಂಚನಾಮೆ ಟೈಪ್ ಮಾಡಿರುತ್ತಾರೆ. ಪೊಟೋವನ್ನು ಯಾರು ತೆಗೆದಿರುತ್ತಾರೆಂದು ನನಗೆ ನೆನಪಿರುವುದಿಲ್ಲ.

ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಠಾಣೆಯಲ್ಲಿ ತಯಾರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರರೋಪಿತರ ಪತ್ತೆಗಾಗಿ ಬಸ್ಸಿನಲ್ಲಿ ನಾವು ತುಮಕೂರಿಗೆ ಹೋಗಿರುತ್ತೇವೆ. ಸರ್ಚ್ ವಾರಟೆಂಟ್ ಪಡೆದುಕೊಂಡಿರುವುದಿಲ್ಲ. ಬಸ್ಸಿನಲ್ಲಿ ಪ್ರಯಾಣ ಮಾಡಿದ ಬಗ್ಗೆ ತನಿಖಾಧಿಕಾರಿ ಮುಂದೆ ಬಸ್ ಟೀಕೇಟ್ ಹಾಜರುಪಡಿಸಿರುವುದಿಲ್ಲ. ಆ ದಿನ ನಾವು ಬೆಳಿಗ್ಗೆ 7-30 ಗಂಟೆಗೆ ಖಾಸಗಿ ಬಸ್ ಹತ್ತಿ ಸಿರಾ ಗೇಟ್ ಗೆ ತಲುಪಿರುತ್ತೇವೆ. ಸದರಿ ಖಾಸಗಿ ಬಸ್ ಯಾವ ಕಂಪನಿಯದು ಎಂದು ನನಗೆ ಹೇಳಲು ಆಗುವುದಿಲ್ಲ. ಮನೆ ಹತ್ತಿರ ಮಹಜರ್ ಮಾಡುವ ಎಷ್ಟು ಪೋಟೋ ತೆಗೆದಿರುತ್ತಾರೆ ಮತ್ತು ಯಾರು ತೆಗೆದಿರುತ್ತಾರೆಂದು ನನಗೆ ಗೊತ್ತಿಲ್ಲ. ರುದ್ರಭೂಮಿಯಲ್ಲಿ ಪಂಚನಾಮೆ ಮಾಡುವಾಗ ಪಿ.ಸಿ ರಮೇಶ್ ರವರೇ ಬೆಳಚ್ಚು ಮಾಡಿರುತ್ತಾರೆ. ಆರೋಪಿ ಶೈಲಜಾ ಮತ್ತು ಪುನಿತ್ ರವರಿಂದ ಎರಡು ಟಚ್ ಸ್ಕ್ರೀನ್ ಮೊಬೈಲ್ ಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇವೆ ಆದರೆ ಕಂಪನಿ ಹೆಸರು ಗೊತ್ತಿರುವುದಿಲ್ಲ. ಸದರಿ ಮೊಬೈಲ್ ಗಳ ಕವರ್ ಗಳ ಬಣ್ಣದಿಂದ ಅವುಗಳನ್ನು ನಾನು ಗುರುತಿಸುತ್ತೇನೆ. ಹಿಂದೆ ಕಪ್ಪು ಬಣ್ಣ ಇರುವ ಮೊಬೈಲ್ ಪುನಿತ್ ಇರುತ್ತದೆ, ಹಿಂದೆ ಕೆಂಪು ಬಣ್ಣ ಇರುವ ಮೊಬೈಲ್ ಶೈಲಜಾ ದ್ದು ಇರುತ್ತದೆ. ಮೊಬೈಲ್ ಗಳನ್ನು ವಶಪಡಿಸಿಕೊಂಡಾಗ ನಾನು ಸಹಿ ಮಾಡಿಲ್ಲ ಎಂದರೆ ನನಗೆ ನೆನಪಿರುವುದಿಲ್ಲ. ನಾನು ಪಂಚನಾಮೆ ಸಮಯದಲ್ಲಿ ಹಾಜರಿಲ್ಲದೇ ಇದ್ದರೂ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**